# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚಳ್ಳಕೆರೆ

## ಸಿ.ಸಿ ನಂ.396/2020

| | | | |
|---|---|---|---|
| ಸಾಕ್ಷಿದಾರರ ಹೆಸರು | : | ವೆಂಕಟೇಶ | ಪಿ.ಡಬ್ಲ್ಯೂ: 05 |
| ತಂದೆಯ ಹೆಸರು | : | ಚೆನ್ನವೆಂಕಟಪ್ಪ | ಸಿ.ಡಬ್ಲ್ಯೂ: 11 |
| ವಯಸ್ಸು | : | ಸು. 34 ವರ್ಷ | |
| ಉದ್ಯೋಗ | : | ಲಾರಿ ಮಾಲೀಕ | |
| ವಾಸ | : | ತಡಪತ್ರಿ, ಅನಂತಪುರ ಜಿಲ್ಲೆ ಹಾಲಿ ವಾಸ ವನಸ್ತಲಿಪುರಂ, ಹೈದ್ರಾಬಾದ್ | |

ದಿನಾಂಕ 27.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

### ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಎಪಿ-16-ಟಿವೈ-6798 ನೋಂದಣಿ ಸಂಖ್ಯೆ ಹೊಂದಿದ ಲಾರಿ ನನ್ನ ಮಾಲೀಕತ್ವಕ್ಕೆ ಸೇರಿದೆ. ಸದರಿ ಲಾರಿ ದಿನಾಂಕ 21.11.2016 ರಂದು ಚಳ್ಳಕೆರೆಯ ಬಳಿ ರಾತ್ರಿ ಸಮಯದಲ್ಲಿ ಅಪಘಾತವಾಗಿತ್ತು. ಯಾವ ಯಾವ ವಾಹನಗಳ ನಡುವೆ ಅಪಘಾತ ಸಂಬವಿಸಿದೆ ಎಂದು ನನಗೆ ಗೊತ್ತಿಲ್ಲ. ಅಪಘಾತ ಹೇಗೆ ಆಗಿತ್ತು ಎಂದು ನನಗೆ ಗೊತ್ತಿಲ್ಲ. ಸದರಿ ದಿವಸ ಲಾರಿ ಚಾಲಕ ಯಾರು ಆಗಿದ್ದರು ಎಂದು ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿಯ ಪರಿಚಯ ನನಗೆ ಇದೆ. ಆತ ನನ್ನ ಸೋದರ ಸಂಬಂದಿ. ಸದರಿ ದಿವಸ ಲಾರಿಯ ಕ್ಲಿನರ್ ಯಾರು ಆಗಿದ್ದರು ಎಂದು ನನಗೆ ಗೊತ್ತಿಲ್ಲ. ಅಪಘಾತ ಯಾರ ತಪ್ಪಿನಿಂದ ಸಂಬವಿಸಿದೆ ಎಂದು ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ನನಗೆ ಈಗ ತೋರಿಸಿದ ನೋಟಿಸಿನಲ್ಲಿರುವ ಸಹಿ ನನ್ನದಾಗಿರುತ್ತದೆ. ಸದರಿ ನೋಟಿಸನ್ನು ಪೊಲೀಸರು ನನಗೆ ನೀಡಿರುತ್ತಾರೆ. ಸದರಿ ಸಾಕ್ಷಿ ಗುರುತಿಸಿದ ದಾಖಲಾತಿಯನ್ನು ನಿಪಿ 20 ಎಂದು ಸಾಕ್ಷಿಯ ಸಹಿಯನ್ನು 20 ಎ ಎಂದು ಗುರುತಿಸಲಾಯಿತು. ನನಗೆ ಈಗ ತೋರಿಸಿದ ಉತ್ತರದಲ್ಲಿರುವ ಸಹಿ ನನ್ನದಾಗಿರುತ್ತದೆ. ಸದರಿ ಉತ್ತರವನ್ನು ನಿಪಿ 21 ಎಂದು ಸಾಕ್ಷಿಯ ಸಹಿಯನ್ನು 21 ಎ ಎಂದು ಗುರುತಿಸಲಾಯಿತು. ನಾನು ಪೊಲೀಸರಿಗೆ ಸೂಕ್ತ ಮುಚ್ಚಳಿಕೆ ಪತ್ರವನ್ನು ಬರೆದುಕೊಟ್ಟು ಅಪಘಾತಕ್ಕೀಡಾದ ವಾಹನವನ್ನು ನನ್ನ ಮಧ್ಯಂತರ ವಶಕ್ಕೆ ಪಡೆದಿರುತ್ತೇನೆ. ಸಾಕ್ಷಿ ಗುರುತಿಸಿದ ಮುಚ್ಚಳಿಕೆ ಪತ್ರವನ್ನು ನಿಪಿ 22 ಎಂದು ಸಾಕ್ಷಿಯ ಸಹಿಯನ್ನು 22 ಎ ಎಂದು ಗುರುತಿಸಲಾಯಿತು. ಪೊಲೀಸರು ನೀಡಿದ ನೋಟಿಸ್ ಮತ್ತು ನನ್ನ ಉತ್ತರದಲ್ಲಿ ಎನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಈ ಸಾಕ್ಷಿಯನ್ನು ಮಾನ್ಯ ಸ.ಸ. ಅವರು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಪರವಾನಿಗೆಯನ್ನು ಕೋರಿದ್ದು, ಪರವಾನಿಗೆಯನ್ನು ನೀಡಲಾಯಿತು)**.

**ಪಾಟೀ ಸವಾಲು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಅಪಘಾತವಾದ ದಿವಸ ನ್ಯಾಯಾಲಯದ ಮುಂದೆ ಇರುವ ಆರೋಪಿಯೇ ನನ್ನ ಲಾರಿಯ ಚಾಲಕನಾಗಿದ್ದನು ಎಂದರೆ ನನಗೆ ಗೊತ್ತಿಲ್ಲ. ನನಗೆ ಮೃತ ಬಿರುಸುಂಟಿ ಯೇಸೂಬು ರವರ ಪರಿಚಯವಿಲ್ಲ. ಅವರು ನನಗೆ ಸೇರಿದ ಲಾರಿಗೆ ಕ್ಲಿನರ್ ಆಗಿದ್ದರೋ ಇಲ್ಲವೋ ಎಂದು ನನಗೆ ಹೇಳಲಾಗುವುದಿಲ್ಲ. ಆರೋಪಿ ಹಿರಿಯೂರು ಕಡೆಯಿಂದ ಚಳ್ಳಕೆರೆ ಕಡೆಗೆ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಎದುರುಗಡೆಯಿಂದ ಬರುತ್ತಿದ್ದ ಟಿಎನ್-28-ಬಿಬಿ -3474 ಲಾರಿಯ ಹಿಂಬದಿಗೆ ಡಿಕ್ಕಿಪಡಿಸಿ ಅಪಘಾತವನ್ನು ಉಂಟು ಮಾಡಿದನು ಎಂದರೆ ನನಗೆ ಗೊತ್ತಿಲ್ಲ. ಲಾರಿಯ ಕ್ಲಿನರ್ ಆಗಿದ್ದ ಬಿರುಸುಂಟಿ ಯೇಸೂಬು ರವರು ಸ್ಥಳ ದಲ್ಲಿಯೇ ಮೃತಪಟ್ಟರು ಎಂದರೆ ನನಗೆ ಗೊತ್ತಿಲ್ಲ. ಅಪಘಾತ ನ್ಯಾಯಾಲಯದ ಮುಂದೆ ಇರುವ ಆರೋಪಿಯ ತಪ್ಪಿನಿಂದ ಉಂಟಾಗಿದೆ ಎಂದು ನಾನು ಪೊಲೀಸರಿಗೆ ನನ್ನ ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿಪಿ-23 ಎಂದು ಗುರುತಿಸಲಾಯಿತು. ಆರೋಪಿ ನನ್ನ ಸಂಬಂದಿಯಾದ ಕಾರಣ ನಾನುಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿ ಪರ ವಕೀಲರಿಂದಃ**

ಏನು ಇಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಈ ಪ್ರಕರಣದಲ್ಲಿ ನೇಮಕಗೊಂಡ ಅನುವಾದಕಾರರು ಆದ ಶ್ರೀ ಬಿ ಪಾಲಯ್ಯ ವಕೀಲರ ಸಹಾಯದಿಂದ ಸಾಕ್ಷಿ ಹೇಳಿದ ಸಾಕ್ಷ್ಯವನ್ನು ಯಥವತ್ತಾಗಿ ಅನುವಾದ ಮಾಡಿದ್ದನ್ನು, ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಳ್ಳಕೆರೆ